



# ಶುಭ ಶಕುನದ ರತ್ನಪಕ್ಷಿ

ರತ್ನ ಪಕ್ಷಿಗಳ ದಾಂಪತ್ಯವೂ ಕುತೂಹಲಕರ. ಒಮ್ಮೆ ಜೊತೆಯಾದ ಈ ಪಕ್ಷಿಗಳು ಜೀವನಪೂರ್ತಿ ಜೊತೆಯಾಗಿಯೇ ಇರುತ್ತವೆ. ಮೇಲ್ನೋಟಕ್ಕೆ ಯಾವುದು ಹೆಣ್ಣು, ಯಾವುದು ಗಂಡು ಎಂಬುದನ್ನು ಗುರುತಿಸಲು ಆಗುವುದಿಲ್ಲ.

★ ಚಿತ್ರ- ಲೇಖನ: ಸುಭಾಸ ಯಾದವಾಡ

ದೊಡ್ಡಪ್ಪ ಒಂದು ಕತೆ ಹೇಳಿದ್ದರು. ಅದು ಬಡ ಹುಡುಗನೊಬ್ಬ ಮಹಾರಾಜನಾದ ಕತೆ. ಆ ಹುಡುಗ ದೂರದ ಪ್ರವಾಸಕ್ಕೆ ಹೊರಟಿದ್ದ. ಅದಕ್ಕೂ ಮುನ್ನ ತನ್ನ ತಾಯಿಗೆ ನಮಸ್ಕರಿಸಿ ಆಶೀರ್ವಾದ ಕೋರಿದ್ದ. ತಾಯಿ ಅವನಿಗೆ ಒಂದು ಮಾತು ಹೇಳಿದ್ದಳು.– 'ನೀನು ಹೋಗುವಾಗ ಹಂಗನ್ನು ಎಡಕ್ಕೆ ಹಾಗೂ ಸಂಬರಗಾಗಿಯನ್ನು ಬಲಕ್ಕೆ ಮಾಡಿಕೊಂಡು ಹೋಗು' ಎಂದು. ಮಗ 'ಆಗಲಿ' ಎಂದು ಹೊರಟ. ಹೋಗುವಾಗ ಹಂಗ ಅವನ ಎಡಗಡೆಗೇ ಕಾಣಿಸಿತು. ಒಳ್ಳೆಯದಾಯಿತು ಎಂದು ಆತ ಮುನ್ನಡೆದ. ಹಂಗ ಎಂದರೆ ನೀಲಿ ಬಣ್ಣದ ಒಂದು ಪುಟ್ಟ ಪಕ್ಷಿ. ಅದನ್ನು ಹೊಂಗ ಎಂದೂ ಕರೆಯುತ್ತಾರೆ.

ಕೆಲ ಸಮಯದ ನಂತರ ಸಂಬರಗಾಗಿಯೂ ಎದುರಾಯಿತು. ಆದರೆ ಅದು ಆತನ ಎಡಗಡೆಗೆ ಇರುವ ಒಂದು ಗಿಡದ ಮೇಲೆ ಕುಳಿತಿತ್ತು. ತಾಯಿ ಹೇಳಿದಂತೆ ಅದನ್ನು ತನ್ನ ಬಲಗಡೆಗೆ ಮಾಡಿಕೊಂಡು ಹೋಗಲು ಆ ಗಿಡದ ಬಲಬದಿಗೆ ಹೋದ. ಕೂಡಲೇ ಆ ಪಕ್ಷಿ ಹಾರಿ ಮತ್ತೆ ಎಡಗಡೆಗೆ ಇರುವ ಗಿಡಕ್ಕೆ ಹಾರಿತು. ಮತ್ತೆ ಆತ ಬಲಕ್ಕೆ ಹೋದ. ಮತ್ತೆ ಅದು ಹಾರಿ ಎಡಕ್ಕೆ

